# ಬಾಣಂತನಕ್ಕೆ ಬಂದ ಬಣ್ಣದ ಹಕ್ಕಿ

ನೆಲಸಿಳ್ಳಾರ ತುಂಬ ನಾಚಿಕೆಯ ಹಕ್ಕಿ. ಹಾಗೆಲ್ಲ ಜನರ ಎದುರು ಬಿಡುಬೀಸಾಗಿ ಓಡಾಡುವುದಿಲ್ಲ.

■ ಚಿತ್ರ–ಲೇಖನ: **ಹ.ಸ.ಬ್ಯಾಕೋಡ**



ಗಂಟಲಿನಲ್ಲಿ ಬಿಳಿ, ತಲೆ ಮತ್ತು ಹೊಟ್ಟೆಯ ಭಾಗದಲ್ಲಿ ಕಿತ್ತಳೆ ಬಣ್ಣ ಹೊಂದಿರುವ, ಮಳೆಗಾಲದಲ್ಲಿ ನೆಲದ ಮೇಲೆ ಓಡಾಡುವ ಹಕ್ಕಿ ಆರೆಂಜ್ ಹೆಡೆಡ್ ಥ್ರಶ್.

ಐದಾರು ವರ್ಷಗಳಿಂದ ಆ ಹಕ್ಕಿಯ ಹಾವಭಾವಗಳನ್ನು ಸೆರೆ ಹಿಡಿಯಲು, ಮಳೆಗಾಲ ಸುರುವಾಗುತ್ತಿದ್ದಂತೆಯೇ ಮಲೆನಾಡು, ಕರಾವಳಿ ಪ್ರದೇಶದಲ್ಲಿ ಕ್ಯಾಮೆರಾ ಹಿಡಿದುಕೊಂಡು ಅಲೆದಾಡುತ್ತಲೇ ಇದ್ದ ನನಗೆ ಪುತ್ತೂರಿನ ಗೆಳೆಯ ಡಾ. ಅಶೋಕಕುಮಾರ್ ಕರೆ ಮಾಡಿ ಹಕ್ಕಿಯ ಚಲನವಲನದ ಮಾಹಿತಿ ನೀಡಿದರು. ಹಾಗಾಗಿ ಮನೆಯಿಂದ ಹೊರಗೆ ಬೀಳದೆ ಹಕ್ಕಿ ಛಾಯಾಗ್ರಹಣಕ್ಕೆ ಬೇಕಾದ ಕ್ಯಾಮೊಫ್ಲೇಜ್ ಹೈಡ್‌ಅನ್ನು ಜೋಡಿಸಿಕೊಂಡು ಬೆಂಗಳೂರಿನಿಂದ ಪುತ್ತೂರಿಗೆ ಪಯಣ ಬೆಳೆಸಿದೆ.

ಮರುದಿನ ಬೆಳಿಗ್ಗೆ ಪುತ್ತೂರಿನ ಬಸ್ ನಿಲ್ದಾಣದಲ್ಲಿ ಇಳಿದಾಗ ಮಳೆ ಜಿನುಗುತ್ತಲೇ ಇತ್ತು. ಗೆಳೆಯ ಕರೆದೊಯ್ಯಲು ಬಂದಿದ್ದರು. ಇಪ್ಪತ್ತು ನಿಮಿಷಗಳ ಪ್ರಯಾಣದ ನಂತರ ಅವರ ಮನೆಯನ್ನು ತಲುಪಿ, ಚಹಾ ತಿಂಡಿ ಮುಗಿಸಿ ಬರಿಗಾಲಲ್ಲೇ ಹಿತ್ತಲಿಗೆ ಕಾಲಿಟ್ಟೆ.

‘ಎರಡು ದಿನಗಳಿಂದ ಇಲ್ಲೇ ಇತ್ತು ಮಾರಾಯ್ರೆ ಆ ಹಕ್ಕಿ, ತೆಂಗಿನ ಮರದ ಬುಡದಲ್ಲಿ..’ ಎಂದರು.

ಸೂಕ್ಷ್ಮವಾಗಿ ತೆಂಗಿನ ಮರಗಳ ಬುಡ, ಅಡಿಕೆ ಮರಗಳ ಬುಡ, ನೆಲ್ಲಿಕಾಯಿ ಗಿಡದ ಬುಡಗಳ ಮರೆಯಲ್ಲಿ ಆ ಹಕ್ಕಿಗಾಗಿ ಕಣ್ಣಾಯಿಸಿದೆ. ಆದರೆ ಸುಳಿವು ಸಿಗಲಿಲ್ಲ. ಅಷ್ಟರಲ್ಲಿ ಬಲಬದಿಯ ಬಾಳೆಯ ಬುಡದಿಂದ ಪುರ್ರನೆ ಹಕ್ಕಿಯೊಂದು ಹಾರಿತು. ತಟ್ಟನೆ ತಿರುಗಿ ನೋಡಿದರೆ ಅದೇ ಆರೆಂಜ್ ಹೆಡೆಡ್ ಥ್ರಶ್! ಸ್ವಲ್ಪ ಹೊತ್ತಲ್ಲೇ ಇನ್ನೊಂದು ಹಕ್ಕಿ ಬಾಳೆಗಿಡದ ಬುಡದಿಂದ ಕುಪ್ಪಳಿಸುತ್ತ ಅಡಿಕೆ ಗಿಡದ ಬುಡದ ಮರೆಯಲ್ಲಿ ಅಡಗಿಕೊಂಡಿತು.

‘ಅರೇ! ಇದ್ಯಾವ ಹಕ್ಕಿ ಮಾರಾಯ್ರೆ? ಆ ಹಕ್ಕಿ ಥರಾನೆ ಇದೆ. ಆದ್ರೆ ಕಲರ್ ಸ್ವಲ್ಪ ಕಡಿಮೆ ಇದೆ ಅಲ್ವಾ?’

‘ಇದು ಆ ಹಕ್ಕಿಯ ಮರಿ ಹಕ್ಕಿ. ಸರಿಯಾಗಿ ರೆಕ್ಕೆಪುಕ್ಕಗಳು ಬಲಿತಿಲ್ಲ. ಹಾಗಾಗಿ ಕಲರ್ ಅಷ್ಟಾಗಿ ಬಂದಿಲ್ಲ. ಕೆಲವು ದಿನಗಳು ಕಳೆಯುತ್ತಲೇ ಹಕ್ಕಿಗೆ ತಾಯಿ ಹಕ್ಕಿಯಂತೆ ಕಲರ್ ಬರುತ್ತದೆ. ಈ ಹಕ್ಕಿಯ ತಲೆ, ಹೊಟ್ಟೆಯ ಭಾಗ ಕಿತ್ತಳೆ ಬಣ್ಣದಿಂದ ಇರುವುದರಿಂದ ಆರೆಂಜ್ ಹೆಡೆಡ್ ಥ್ರಶ್ ಎಂದು ಕರೆಯುತ್ತಾರೆ. ಮರಿ ಹಕ್ಕಿ ಇಲ್ಲಿರುವುದರಿಂದ ತಾಯಿ ಹಕ್ಕಿ ಮರಳಿ ಇತ್ತ ಕಡೆಗೆ ಬರುತ್ತದೆ. ಕಾಯೋಣ ಇರಿ’ ಎಂದೆ.



